ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ತಾಂ.ಶಿ.ಇ 39 ಸಿಡಿಸಿ(1) 2024 (ಕ.ನಂ.1515446)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:07/07/2025.

**ಸುತ್ತೋಲೆ**

ವಿಷಯ: ಪ್ರಥಮ ವರ್ಷದ (1&2 ಸೆಮಿಸ್ಟರ್) C_25 ಪರಿಷ್ಕೃತ ಡಿಪ್ಲೊಮಾ / ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂ: ಇಡಿ 79 ಡಿಟಿಇ 2025, ದಿ:27.06.2025
2. ಈ ಕಚೇರಿ ಸುತ್ತೋಲೆ ಸಂಖ್ಯೆ: DTE ADMI0 EST (3)/1/2024, ದಿ:20.02.2025

ಮೇಲ್ಕಂಡ ವಿಷಯದ ಬಗ್ಗೆ, ಉಲ್ಲೇಖ(1)ರ ಸರ್ಕಾರದ ಆದೇಶದಂತೆ, 2025-26ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ವ್ಯಾಸಂಗಗಳಲ್ಲಿ ಪ್ರಥಮ ವರ್ಷದ (1 & 2 ಸೆಮಿಸ್ಟರ್) C_25 ಪರಿಷ್ಕೃತ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳನ್ನು ಅಳವಡಿಸಲಾಗಿದೆ. C_25 ಪರಿಷ್ಕೃತ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳನ್ನು "Regulations of Diploma and Post Diploma Programme-Curriculum 2025 (C-25) ರಲ್ಲಿ ಪ್ರಕಟಿಸಿರುವ ನಿಯಮಗಳನ್ವಯ ಕೆಳಕಂಡ ಸೂಚನೆಗಳನ್ನು ಪಾಲಿಸುವಂತೆ ತಿಳಿಸಿದೆ.

1. C_25 ಪರಿಷ್ಕೃತ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳು 2025-26ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆದ ಪ್ರಥಮ ವರ್ಷದ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ ಮತ್ತು C_25 ಪರಿಷ್ಕೃತ ಪಠ್ಯಕ್ರಮಗಳಲ್ಲಿ ನಿಗಧಿಪಡಿಸಿರುವ ಮಾನದಂಡಗಳ ಪ್ರಕಾರ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವುದು.
2. 2025-26ನೇ ಶೈಕ್ಷಣಿಕ ಸಾಲಿನಲ್ಲಿ 3ನೇ ಮತ್ತು 5ನೇ ಸೆಮಿಸ್ಟರ್ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ವ್ಯಾಸಂಗಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ C_20 ಪಠ್ಯಕ್ರಮಗಳು ಅನ್ವಯಿಸಿದ್ದು, ಸದರಿ ವಿದ್ಯಾರ್ಥಿಗಳಿಗೆ C_20 ಪಠ್ಯಕ್ರಮಗಳ ನಿಯಮಾವಳಿಗಳು ಅನ್ವಯಿಸುತ್ತದೆ.
3. ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ, ಸೆಮಿಸ್ಟರ್ ಪ್ರಾರಂಭದಲ್ಲಿ ಎರಡು ವಾರಗಳ "Induction Program" ಕಾರ್ಯಕ್ರಮವು ಕಡ್ಡಾಯವಾಗಿದ್ದು, ಮಾದರಿ "Induction Program" ಕಾರ್ಯಕ್ರಮದ ವಿವರಗಳನ್ನು "Regulations of Diploma and Post Diploma Programme-Curriculum 2025 (C-25) ರ ನಿಯಮಗಳಲ್ಲಿ ಪ್ರಕಟಿಸಲಾಗಿದೆ.
4. C_25 ಪರಿಷ್ಕೃತ ಡಿಪ್ಲೊಮಾ ಪಠ್ಯಕ್ರಮಗಳಲ್ಲಿ ಕನ್ನಡ-1 ಮತ್ತು ಕನ್ನಡ-2 ಪಠ್ಯಕ್ರಮಗಳು ಕ್ರಮವಾಗಿ 3 ಮತ್ತು 4ನೇ ಸೆಮಿಸ್ಟರ್‌ನಲ್ಲಿದ್ದು, ಕನ್ನಡ ಭಾಷಾ ಅತಿಥಿ ಉಪನ್ಯಾಸಕರಿಗೆ 2025-26ನೇ ಶೈಕ್ಷಣಿಕ ಸಾಲಿನ ಸಮ (Even) ಸೆಮಿಸ್ಟರ್‌ನಲ್ಲಿ C_25 ಪರಿಷ್ಕೃತ ಕನ್ನಡ-1 ಮತ್ತು ಕನ್ನಡ-2 ಪಠ್ಯಕ್ರಮಗಳ ಕಾರ್ಯಭಾರಕ್ಕೆ (ವಾರಕ್ಕೆ ಎರಡು ಗಂಟೆಗಳು) ಅನುಗುಣವಾಗಿ, ಕನ್ನಡ ಪಠ್ಯವಿಷಯ ಸಂಬಂಧ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಗೆ ಪೂರಕವಾಗಿ ಕಾರ್ಯ ಪುಸ್ತಕಗಳ ತಯಾರಿಕೆ, ಪ್ರಶ್ನೆ ಪತ್ರಿಕೆ ತಯಾರಿಕೆ, ಕನ್ನಡ ಭಾಷಾ ಚಟುವಟಿಕೆಗಳ ಪೂರ್ವ ತಯಾರಿ ಕಾರ್ಯವನ್ನು ವಹಿಸಿ, ಉಲ್ಲೇಖ(2)ರ ಸುತ್ತೋಲೆಯಲ್ಲಿ ತಿಳಿಸಿದಂತೆ ಅತಿಥಿ ಉಪನ್ಯಾಸಕರಿಗೆ ಶೈಕ್ಷಣಿಕ ವರ್ಷದಲ್ಲಿ ನಿಗಧಿಪಡಿಸಿರುವ 10 ತಿಂಗಳ ಕಾರ್ಯಭಾರವನ್ನು ಕಡ್ಡಾಯವಾಗಿ ನೀಡುವಂತೆ ಸೂಚಿಸಿದೆ. C_25 ಪರಿಷ್ಕೃತ ಡಿಪ್ಲೊಮಾ ಪಠ್ಯಕ್ರಮಗಳ ಪಠ್ಯವಿಷಯದ ಬೋಧನೆ, ತರಬೇತಿ, ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಆಯಾ ಡಿಪ್ಲೊಮಾ ಪ್ರೋಗ್ರಾಂ ಪಠ್ಯಕ್ರಮಗಳ Scheme of Studies ಗಳಲ್ಲಿ ತಿಳಿಸಿರುವ ಬೋಧನಾ ವಿಭಾಗ ಮತ್ತು ಸೂಚನೆಗಳಂತೆ ನಿರ್ವಹಿಸುವುದು.

5. C_25 ಪರಿಷ್ಕೃತ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳು Integrated Pedagogy ಮಾದರಿಯಲ್ಲಿದ್ದು, ಪ್ರತಿ ಕೋರ್ಸ್‌ಗಳ ಥಿಯರಿ ಹಾಗೂ ಪ್ರಾಕ್ಟೀಸ್ ತರಬೇತಿಗಳು ಕ್ರಮವಾಗಿ 50:50/40:60

ಅನುಪಾತದಲ್ಲಿರುತ್ತದೆ. ಪಠ್ಯಕ್ರಮ ಬೋಧನೆ, ತರಬೇತಿ, ಅಂತರಿಕ (CIE) ಮತ್ತು ಸೆಮಿಸ್ಟರ್ ಮುಕ್ತಾಯ (SEE) ಪರೀಕ್ಷಾ ಕ್ರಮಗಳು ಹಾಗೂ ಅವುಗಳ ಮೌಲ್ಯಮಾಪನವನ್ನು ಆಯಾ ಪ್ರೋಗ್ರಾಂಗಳಲ್ಲಿ ನಿಗಧಿಪಡಿಸಿರುವ "Scheme of Studies" ಪ್ರಕಾರ ನಡೆಸುವುದು. ಪ್ರತಿ ಕೋರ್ಸುಗಳ ಅಂತರಿಕ ಪರೀಕ್ಷಾ ಮೌಲ್ಯಮಾಪನವನ್ನು (CIE) ಗರಿಷ್ಠ 50 ಅಂಕಗಳಿಗೆ ನಿಗಧಿಪಡಿಸಿದ್ದು, ಅಂತರಿಕ ಪರೀಕ್ಷಾ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳು ಪಡೆದ ಸರಾಸರಿ (Average) ಅಂಕಗಳ ದಶಾಂಶವನ್ನು ಮಾತ್ರ ಪೂರ್ಣ ಅಂಕಗಳಾಗಿ ಪರಿವರ್ತಿಸಿ, ಅಂತಿಮ ಅಂತರಿಕ ಪರೀಕ್ಷಾ ಅಂಕಗಳನ್ನು ದಾಖಲಿಸುವುದು. ಅಂತರಿಕ ಪರೀಕ್ಷಾ ಮೌಲ್ಯಮಾಪನದಲ್ಲಿ ಶೇಕಡಾ 40 ಅಂಕಗಳನ್ನು (ಗರಿಷ್ಠ 50 ಅಂಕಗಳಿಗೆ ಕನಿಷ್ಠ 20 ಅಂಕಗಳು) ಪಡೆದ ವಿದ್ಯಾರ್ಥಿಗಳು ಮಾತ್ರ ಸೆಮಿಸ್ಟರ್ ಮುಕ್ತಾಯದ ಪರೀಕ್ಷೆಗೆ (Semester End Examination-SEE) ಹಾಜರಾಗಲು ಅರ್ಹರಾಗಿರುತ್ತಾರೆ.

6. C_25 ಪರಿಷ್ಕೃತ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳ ಸೆಮಿಸ್ಟರ್ ಮುಕ್ತಾಯದ ಥಿಯರಿ ಪರೀಕ್ಷೆಯಲ್ಲಿ (Semester End Examination-Theory) ವಿದ್ಯಾರ್ಥಿಗಳಿಗೆ 100 ಅಂಕಗಳ (3 ಗಂಟೆ) ಪ್ರಶ್ನೆ ಪತ್ರಿಕೆಯನ್ನು ನೀಡುವುದು ಮತ್ತು ಥಿಯರಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಗರಿಷ್ಠ 50 ಅಂಕಗಳ ಮಾಪನಕ್ಕೆ ಸರಿಯಾಗಿ ಪರಿವರ್ತಿಸುವುದು (Scale Down to Max 50 Marks). ಸೆಮಿಸ್ಟರ್ ಮುಕ್ತಾಯದ ಪ್ರಾಯೋಗಿಕ ಪರೀಕ್ಷೆಯ (Semester End Examination-Practical) ಪ್ರಶ್ನೆ ಪತ್ರಿಕೆಯು 50 ಅಂಕಗಳಿಗೆ (3 ಗಂಟೆ ಅವಧಿ) ನಿಗಧಿಪಡಿಸುವುದು. ಸೆಮಿಸ್ಟರ್ ಮುಕ್ತಾಯದ ಥಿಯರಿ ಮತ್ತು ಪ್ರಾಕ್ಟಿಕಲ್ ಪರೀಕ್ಷೆಗಳಲ್ಲಿ (Semester End Examination-Theory & Practical) ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಶೇಕಡಾ 40 ಅಂಕಗಳನ್ನು (ಗರಿಷ್ಠ 50 ಅಂಕಗಳಿಗೆ ಕನಿಷ್ಠ 20 ಅಂಕಗಳು) ಪಡೆಯಬೇಕಾಗಿರುತ್ತದೆ.
7. ಅಂತರಿಕ (CIE) ಹಾಗೂ ಸೆಮಿಸ್ಟರ್ ಮುಕ್ತಾಯದ (SEE) ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಸೇರಿಸಿ, ಗರಿಷ್ಠ 100 ಅಂಕಗಳ ಮಾಪನದ ಆಧಾರದಲ್ಲಿ ವಿದ್ಯಾರ್ಥಿಗಳಿಗೆ Grade Point ನ್ನು ನೀಡಲಾಗುವುದು. ಅಂತಿಮವಾಗಿ ಪ್ರತಿ ಸೆಮಿಸ್ಟರ್ ಪರೀಕ್ಷಾ ಫಲಿತಾಂಶಗಳನ್ನು SGPA/CGPA ಮಾಪನದಲ್ಲಿ ಪ್ರಕಟಿಸಲಾಗುವುದು.
8. C_25 ಪರಿಷ್ಕೃತ ಡಿಪ್ಲೊಮಾ / ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳ ಪ್ರತಿ ಇಂಜಿನಿಯರಿಂಗ್ ಕೋರ್ಸುಗಳಲ್ಲಿ ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳು ಸಂಯೋಜಿತವಾಗಿದ್ದು, Integrated Pedagogy ಮಾದರಿಯ ಪಠ್ಯಕ್ರಮಗಳನ್ನು ಅಳವಡಿಸಲಾಗಿದೆ. ಇದು ವಿದ್ಯಾರ್ಥಿಗಳಲ್ಲಿ ಪ್ರಸ್ತುತ ಅಗತ್ಯವಿರುವ ಇಂಜಿನಿಯರಿಂಗ್ ಜ್ಞಾನವನ್ನು ಉದ್ಯೋಗ ಸಿದ್ಧ/ಉದ್ಯಮ ಸಿದ್ಧ ಕೌಶಲ್ಯಗಳಿಗೆ ಸಂಯೋಜಿಸಲು ಸಹಕಾರಿಯಾಗಿದೆ. ಪ್ರತಿ ಕೋರ್ಸುಗಳ ಥಿಯರಿ ಮತ್ತು ಪ್ರಾಯೋಗಿಕ ವಿಷಯಗಳಿಗೆ ಸಮಾನವಾದ ತರಬೇತಿ, ಪರೀಕ್ಷೆ ಮತ್ತು ಮೌಲ್ಯಮಾಪನದ ಆದ್ಯತೆ ನೀಡಲಾಗಿದೆ. ಅಂತರಿಕ ಪರೀಕ್ಷೆ ಮತ್ತು ಮೌಲ್ಯಮಾಪನ (CIE) ಕ್ರಮಗಳನ್ನು ಸೆಮಿಸ್ಟರ್ ಮುಕ್ತಾಯದ (SEE) ಪರೀಕ್ಷೆ ಮತ್ತು ಮೌಲ್ಯಮಾಪನದಲ್ಲಿ ಅನುಸರಿಸುವ ಕಟ್ಟುನಿಟ್ಟಿನ ಉಪಕ್ರಮಗಳಂತೆ ಕಡ್ಡಾಯವಾಗಿ ಮತ್ತು ಗಂಭೀರತೆಯಿಂದ ನಡೆಸುವುದು.
9. C_25 ಪರಿಷ್ಕೃತ ಡಿಪ್ಲೊಮಾ ಪಠ್ಯಕ್ರಮಗಳಲ್ಲಿರುವ ಇಂಜಿನಿಯರಿಂಗ್ ಗಣಿತ-1 ಮತ್ತು 2 ರ ಬೋಧನಾ ಪಠ್ಯವಿಷಯಗಳನ್ನು ಹೊರತುಪಡಿಸಿ (ಇಂಜಿನಿಯರಿಂಗ್ ಗಣಿತ-1 ಮತ್ತು 2 ಪಠ್ಯಕ್ರಮಗಳಲ್ಲಿ ಸೂಚಿಸಿದಂತೆ), ಉಳಿದ ಎಲ್ಲಾ ಇಂಜಿನಿಯರಿಂಗ್ ಪಠ್ಯವಿಷಯಗಳನ್ನು ತಲಾ 30 ವಿದ್ಯಾರ್ಥಿಗಳ ಬ್ಯಾಚ್‌ಗಳಲ್ಲಿ, ಬೋಧನೆ (Lecture) ಮತ್ತು ಪ್ರಾಯೋಗಿಕ (Practice) ವಿಷಯಗಳ ತರಬೇತಿ, ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ನಡೆಸುವುದು.

ಮೇಲ್ಕಂಡ ಎಲ್ಲಾ ಸೂಚನೆಗಳು ಮತ್ತು "Regulations of Diploma and Post Diploma Programme-Curriculum 2025 (C-25) ನಲ್ಲಿ ಪ್ರಕಟಿಸಿರುವ ಎಲ್ಲಾ ರೂಪುರೇಷೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಪ್ರಥಮ ವರ್ಷದ (1 & 2 ಸೆಮಿಸ್ಟರ್) C_25 ಪರಿಷ್ಕೃತ ಡಿಪ್ಲೊಮಾ/ಪೋಸ್ಟ್ ಡಿಪ್ಲೊಮಾ ಪಠ್ಯಕ್ರಮಗಳನ್ನು ಯಶಸ್ವಿಯಾಗಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿದೆ.

Digitally signed by
MANJUSHREE N
Date: 11-07-2025
15:06:11

ಆಯುಕ್ತರು

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರಿಗೆ- ಸಂಸ್ಥೆಯ ಎಲ್ಲಾ ಉಪನ್ಯಾಸಕರು/ಬೋಧಕರು ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತರಲು ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ನಿರ್ದೇಶಕರು, ತಾಂ.ಶಿ.ಇ, ಬೆಂಗಳೂರು - ಮಾಹಿತಿಗಾಗಿ.
2. ಜಂಟಿ ನಿರ್ದೇಶಕರು-( ಪರೀಕ್ಷೆ)- ತಾಂ.ಪ.ಮಂ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು-(ತನಿಖೆ)- ತಾಂ.ಶಿ.ಇ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
4. ಜಂಟಿ ನಿರ್ದೇಶಕರು-(ಸಿಡಿಸಿ)-ತಾಂ.ಶಿ.ಇ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ನಿರ್ದೇಶಕರು-(ಎ.ಸಿ.ಎಂ)-ತಾಂ.ಶಿ.ಇ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ನಿರ್ದೇಶಕರು-(ಯೋಜನೆ)-ತಾಂ.ಶಿ.ಇ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
7. ಕಡತಕ್ಕೆ